ಓ.ಎಸ್.ನಂ.209/2017

ಡಿ.ಡಬ್ಲ್ಯು:1

**ದಿನಾಂಕ:14.03.2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲು:ವಾದಿ ಪರ ಶ್ರೀ.ಸಿ.ವಿ.ಎಸ್. ವಕೀಲರಿಂದ:**

ವಾದಿಗಳು ಈ ದಾವೆಯನ್ನು ಅಸೆಸ್ಮೆಂಟ್ ನಂ.219 ರ ಆಸ್ತಿಯ ಕುರಿತಾಗಿ ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಈ ದಾವೆಯನ್ನು ದಾಖಲು ಮಾಡಿಕೊಂಡಿರುತ್ತಾರೆ. ನಾನು ಗರ್ಜೆ ಗ್ರಾಮದಲ್ಲಿ ಹುಟ್ಟಿದಾಗಿನಿಂದಲೂ

ವಾಸವಾಗಿದ್ದೇನೆ. ವಾದಿಗಳು ಗೊತ್ತು. ವಾದಿಗಳು ನನ್ನ ಸಂಬಂಧಿಕರು. ಅಸೆಸ್ಮೆಂಟ್.219 ರ ಆಸ್ತಿಯು ನಮ್ಮ ಅಜ್ಜ ಖಲಂದರ್ ಸಾಬ್ ಅವರಿಂದ ನನ್ನ ತಂದೆ ಮಹಮದ್ ಹುಸೇನ್ ಸಾಬ್ ಅವರಿಗೆ ಬಂದಿರುತ್ತದೆ. ನನ್ನ ತಂದೆ ಮಹಮದ್ ಹುಸೇನ್ ಸಾಬ್ ಅವರಿಂದ 10 ವರ್ಷಗಳ ಹಿಂದೆ ಸದರಿ ಆಸ್ತಿ ನನ್ನ ಹೆಸರಿಗೆ ಬಂದಿರುತ್ತದೆ. ಸದರಿ ಆಸ್ತಿ ನಿಮ್ಮ ಅಜ್ಜ ಮತ್ತು ನಿಮ್ಮ ತಂದೆ ಹೆಸರಿನಲ್ಲಿ ಖಾತೆ ಇದ್ದ ಬಗ್ಗೆ ಗ್ರಾಮ ಪಂಚಾಯ್ತಿಯಲ್ಲಿ ದಾಖಲೆಗಳು ಇವೆಯಾ? ಎಂಬ ಪ್ರಶ್ನೆಗೆ ಸಾಕ್ಷಿಯು ಎಲ್ಲವೂ ಹರಿದುಹೋಗಿದೆ ಎಂದು ಪಂಚಾಯ್ತಿ ಅವರು ದಾಖಲೆ ತೋರಿಸಿಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿ ನಿಮ್ಮ ಹೆಸರಿಗೆ ಖಾತೆ ಬರುವ ಮುಂಚೆ ಪಂಚಾಯ್ತಿಯಲ್ಲಿ ಯಾರ ಹೆಸರಿನಲ್ಲಿತ್ತು ಅಂದರೆ, ಸಾಕ್ಷಿಯು ನಾನು ಅನುಭವದಲ್ಲಿದ್ದ ಮೇರೆಗೆ ಅಸೆಸ್ಮೆಂಟ್.219 ರ ಆಸ್ತಿಯನ್ನು ನನ್ನ ಹೆಸರಿಗೆ ಖಾತೆ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಅಜ್ಜನ ಹೆಸರಿನಲ್ಲಾಗಲೀ ಅಥವಾ ನನ್ನ ತಂದೆಯ ಹೆಸರಿನಲ್ಲಾಗಲೀ ಅಸೆಸ್ಮೆಂಟ್.219 ರ ಆಸ್ತಿ ಇದ್ದ ಬಗ್ಗೆ ದಾಖಲೆಗಳು ಇಲ್ಲ ಅಂದರೆ ಸರಿ, ಸಾಕ್ಷಿ ಮುಂದುವರಿದು ಪಂಚಾಯ್ತಿಯವರು ಹರಿದುಹೋಗಿವೆ ಎಂದು ತಿಳಿಸಿದ್ದಾರೆ ಎಂದು ನುಡಿಯುತ್ತಾರೆ. ಅಸೆಸ್ಮೆಂಟ್.219 ರ ಆಸ್ತಿಯ ದಾಖಲೆಗಳು ಗ್ರಾಮ ಪಂಚಾಯ್ತಿಯಲ್ಲಿ ಹರಿದುಹೋಗಿವೆ ಎಂಬುದರ ಬಗ್ಗೆ ನಾನು ಯಾವುದೇ ಹಿಂಬರಹವನ್ನು ಪಡೆದಿಲ್ಲ.

ನಾನು ಮನೆ ಕಟ್ಟಲು ಹೋದಾಗ ವಾದಿಗಳು ನಾನು ಮನೆ ಕಟ್ಟಲು ಹೋದ ಆಸ್ತಿ ಅವರದೆಂದು ಅಲ್ಲಿ ಮನೆ ಕಟ್ಟದಂತೆ ತಡೆದಿರುತ್ತಾರೆ ಅಂದರೆ ಸರಿ. ವಾದಿಗಳು ನಾನು ಅವರ ಜಾಗದಲ್ಲಿ ಮನೆ ನಿರ್ಮಿಸುತ್ತಿದ್ದೇನೆ ಎಂದು ಯಗಟಿ ಪೋಲೀಸರಿಗೆ ದೂರು ನೀಡಿದ್ದರು ಅಂದರೆ ಸರಿ. ಪೋಲೀಸರು ನಾನು ಮನೆ ಕಟ್ಟದಂತೆ ಹೇಳಿದ ನಂತರ ನಾನು ವಾದಿಗಳ ವಿರುದ್ಧ ಅಸಲು ದಾವಾ ಸಂಖ್ಯೆ.190/2005 ರಂತೆ ದಾವೆ ದಾಖಲಿಸಿದ್ದೆ ಅಂದರೆ ಸರಿ. ಸದರಿ ದಾವೆಯಲ್ಲಿ ಅಸೆಸ್ಮೆಂಟ್.219 ರ ಆಸ್ತಿ ನಮ್ಮ ಅಜ್ಜನಿಂದ ತಂದೆಗೆ ಮತ್ತು ತಂದೆಯಿಂದ ನನಗೆ ಬಂದಿರುವುದಾಗಿ ತಿಳಿಸಿದ್ದೇನೆ. ಸದರಿ ದಾವೆಯಲ್ಲಿ ಅಸೆಸ್ಮೆಂಟ್ ನಕಲು, ಕಂದಾಯ ರಶೀದಿ ಮತ್ತು ಪಟ್ಟಾ ಪುಸ್ತಕವನ್ನು ಮಾತ್ರ ಹಾಜರುಪಡಿಸಿದ್ದೇನೆ ಅಂದರೆ ಸರಿ.

**ಡಿ.ಡಬ್ಲ್ಯು:1**

2005 ರಿಂದ 2021 ನೇ ಇಸವಿವರೆಗೆ ಅಸೆಸ್ಮೆಂಟ್.219 ಕ್ಕೆ ಕಂದಾಯ ಪಾವತಿ ಮಾಡಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಅಂದರೆ ಸರಿಯಲ್ಲ. ನಿಡಿ-2 ಸಾಮಾನ್ಯ ರಶೀದಿಯಂತೆ ನಿವೇಶನ ತೆರಿಗೆ, ಅಂಗಡಿ ತೆರಿಗೆ ಮತ್ತು ವಿದ್ಯುತ್ ತೆರಿಗೆ ಹಾಗೂ ಇತರೆ ತೆರಿಗೆಗಳಿಗೆ ಸಂಬಂಧಿಸಿದಂತೆ ರೂ.1300/-ಗಳನ್ನು ಪಾವತಿಸಿರುವ ರಶೀದಿಯಾಗಿರುತ್ತದೆ ಅಂದರೆ ಸರಿ. ನಿಡಿ-2 ಸಾಮಾನ್ಯ ರಶೀದಿಯನ್ನು ದಿ:15.02.2022 ರಂದು ನೀಡಲಾಗಿರುತ್ತದೆ ಅಂದರೆ ಸರಿ. 2005 ನೇ ಇಸವಿಗಿಂತ ಹಿಂದೆ ಅಸೆಸ್ಮೆಂಟ್.219 ರ ಆಸ್ತಿ ನಿಮ್ಮ ಹೆಸರಿನಲ್ಲಾಗಲೀ ಅಥವಾ ನಿಮ್ಮ ತಂದೆಯ ಹೆಸರಿನಲ್ಲಾಗಲೀ ಖಾತೆ ಇರಲಿಲ್ಲ ಅಂದರೆ, ಸಾಕ್ಷಿಯು ಖಾತೆ ಇತ್ತು ಆದರೆ ಪಂಚಾಯ್ತಿಯವರು ದಾಖಲೆಗಳು ನಶಿಸಿ ಹೋಗಿವೆ ಎಂದು ದಾಖಲೆ ನೀಡಿಲ್ಲ ಎಂದು ನುಡಿಯುತ್ತಾರೆ. ನನ್ನ ಪ್ರತಿವಾದ ಪತ್ರದಲ್ಲಾಗಲೀ ಅಥವಾ ಸಾಕ್ಷ್ಯ ಪ್ರಮಾಣಪತ್ರದಲ್ಲಾಗಲೀ ಅಸೆಸ್ಮೆಂಟ್.219 ರ ಆಸ್ತಿಯ ದಾಖಲೆಗಳು ಪಂಚಾಯ್ತಿಯಲ್ಲಿ ನಶಿಸಿ ಹೋಗಿರುವುದಾಗಿ ದಾಖಲೆಗಳನ್ನು ನೀಡಿಲ್ಲ ಎಂದು ತಿಳಿಸಿರುವುದಿಲ್ಲ ಅಂದರೆ ಸರಿಯಲ್ಲ. ವಾದಿಗಳ ಕುಟುಂಬಕ್ಕೆ ಸೇರಿದ ಆಸ್ತಿಯ ಮೇಲೆ ನಮಗೆ ಹಕ್ಕು ಇಲ್ಲ ಮತ್ತು ನಮಗೆ ಸೇರಿದ ಆಸ್ತಿಯ ಮೇಲೆ ವಾದಿಗಳಿಗೆ ಹಕ್ಕು ಇಲ್ಲ ಅಂದರೆ ಸರಿ.

ಕರೀಂ ಸಾಬ್ ಅಲಿಯಾಸ್ ಅಬ್ದುಲ್ ಕರೀಂ ಸಾಬ್ ಅವರ ಹೆಸರಿನಲ್ಲಿ ದಾವಾ 'ಎ' ಶೆಡ್ಯೂಲ್ ಆಸ್ತಿ ಇತ್ತು ಎಂಬುದನ್ನು ನಾನು ನೋಡಿರುತ್ತೇನೆ. ದಾವಾ 'ಎ' ಶೆಡ್ಯೂಲ್ ಆಸ್ತಿ ಗರ್ಜೆ ಗ್ರಾಮದಲ್ಲಿ ಪ್ರತ್ಯೇಕವಾಗಿ ಅಸ್ತಿತ್ವದಲ್ಲಿ ಇರುತ್ತದೆ. ದಾವಾ 'ಎ' ಶೆಡ್ಯೂಲ್ ಆಸ್ತಿವಾದಿಗಳ ಕುಟುಂಬಕ್ಕೆ ಸೇರಿದ್ದು ಅಂದರೆ ಇರಬಹುದು. ಅಸೆಸ್ಮೆಂಟ್.219 ರ ಆಸ್ತಿ ಮತ್ತು 222 ರ ಆಸ್ತಿ ಬೇರೆ ಬೇರೆಯಾಗಿರುತ್ತವೆ. ಅಸೆಸ್ಮೆಂಟ್.219 ರ ಪಶ್ಚಿಮ ದಿಕ್ಕಿಗೆ ಪ್ಯಾರೆಜಾನ್ ಎಂಬುವವರ ಆಸ್ತಿ ಎಂದು ತೋರಿಸಲಾಗಿದ್ದು, ಅವರು ಇದ್ದಾರ? ಎಂದು ಕೇಳಲಾಗಿ ಸಾಕ್ಷಿಯು ಆಶಿಯಾ ಜಾನ್ ಕೋಂ ಪ್ಯಾರೆಜಾನ್ ಅವರು ಇದ್ದಾರೆ ಎಂದು ನುಡಿಯುತ್ತಾರೆ. ವಾದಿಗಳ ಅಣ್ಣನ ಹೆಂಡತಿ ಸದರಿ ಆಶಿಯಾ ಜಾನ್ ಅಂದರೆ ಸರಿ. ನಮ್ಮ ಮನೆ ಮತ್ತು ಆಶಿಯಾ ಜಾನ್ ಅವರ ಮನೆಯ ನಡುವೆ ಗಲ್ಲಿ ಇರುತ್ತದೆ. ಆಶಿಯಾ ಜಾನ್ ಕೋಂ ಪ್ಯಾರೆಜಾನ್ ಅವರಿಗೆ ಸೇರಿದ ಆಸ್ತಿ ಅವರಿಗೆ ಹೇಗೆ ಬಂತು ಎಂದು ನನಗೆ

ಗೊತ್ತಿಲ್ಲ. ಆಶಿಯಾ ಜಾನ್ ಹಾಗೂ ಪ್ಯಾರೆಜಾನ್ ಅವರು ನನಗೆ ಸಂಬಂಧಿಗಳಲ್ಲ ಅಂದರೆ ಸರಿಯಲ್ಲ. ಆಶಿಯಾ ಜಾನ್ ಕೋಂ ಪ್ಯಾರೆಜಾನ್ ಮತ್ತು ನಮ್ಮ ಮನೆಯ ನಡುವೆ ಮುಂಚೆ ಒಂದೇ ಸಾಮಾನ್ಯ ಗೋಡೆ ಇತ್ತು ಅಂದರೆ ಸರಿ. ಈಗ ಮಧ್ಯ ಗಲ್ಲಿ ಬಿಟ್ಟು ಬೇರೆ ಬೇರೆ ಪ್ರತ್ಯೇಕ ಗೋಡೆಗಳನ್ನು ನಿರ್ಮಿಸಿಕೊಂಡಿದ್ದೇವೆ ಅಂದರೆ ಸರಿ. ಆಶಿಯಾ ಜಾನ್ ಕೋಂ ಪ್ಯಾರೆಜಾನ್ ಮತ್ತು ನಮ್ಮ ಮನೆಯ ನಡುವೆ ಮುಂಚೆ ಒಂದೇ ಸಾಮಾನ್ಯ ಗೋಡೆ ಇದ್ದ ಸಂದರ್ಭದಲ್ಲಿ ಎರಡೂ ಮನೆಗಳು ಸೇರಿ 42X33 ಅಡಿ ಇತ್ತು ಅಂದರೆ ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರಿದು ನನ್ನ ಮನೆಯು ಪ್ರತ್ಯೇಕವಾಗಿ 13X33 ಅಡಿ ಇತ್ತು ಎಂದು ನುಡಿಯುತ್ತಾರೆ. ಆಶಿಯಾ ಜಾನ್ ರವರು ಮನೆಯ ವಿಸ್ತೀರ್ಣ, ಅಸೆಸ್ಮೆಂಟ್ ಸಂಖ್ಯೆ ಹಾಗೂ ಮನೆಯು ಯಾರ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ಆಶಿಯಾ ಜಾನ್ ಅವರ ಮನೆ ಹಾಗೂ ನಾನು ವಾಸ ಮಾಡುತ್ತಿರುವ ಮನೆ ಸೇರಿ ಅಸೆಸ್ಮೆಂಟ್ ಸಂಖ್ಯೆ.222, ವಿಸ್ತೀರ್ಣ 42X33 ಎಂಬ ಆಸ್ತಿ ಮೂಲತಃ ಕರೀಂ ಸಾಬ್ ಯಾನೆ ಅಬ್ದುಲ್ ಸಾಬ್ ಕರೀಂ ಸಾಬ್ ಅವರ ಹೆಸರಿನಲ್ಲಿತ್ತು ಅಂದರೆ ಸರಿಯಲ್ಲ. ದಾವಾ 'ಎ' ಶೆಡ್ಯೂಲ್ ಆಸ್ತಿ ಕರೀಂ ಸಾಬ್ ಯಾನೆ ಅಬ್ದುಲ್ ಸಾಬ್ ಕರೀಂ ಸಾಬ್ ಅವರ ಹೆಸರಿನಲ್ಲಿದ್ದ ಕಾರಣ ನನಗೆ ಸೇರಿದ ಆಸ್ತಿ ನನ್ನ ತಂದೆ ಮತ್ತು ಅಜ್ಜನ ಹೆಸರಿನಲ್ಲಿತ್ತು, ದಾಖಲೆಗಳು ನಶಿಸಿ ಹೋಗಿವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಅಸೆಸ್ಮೆಂಟ್ ಸಂಖ್ಯೆ.219 ರಲ್ಲಿ 2005-06 ನೇ ಸಾಲಿನಲ್ಲಿ ಮನೆ ನಿರ್ಮಿಸಿರುತ್ತೇನೆ. 1 ನೇ ಪ್ರತಿವಾದಿ ಜಂಷದ್ ಬಾನು ಅಂದರೆ ನನ್ನ ಮಗಳು. ನಾನು ನಿರ್ಮಿಸಿಕೊಂಡಿರುವ ಮನೆ ಹೆಂಚಿನ ಮನೆಯಾಗಿದ್ದು ಆಶ್ರಯ ಯೋಜನೆ ಅಡಿ ಮಂಜೂರಾಗಿರುತ್ತದೆ. ಆಶ್ರಯ ಯೋಜನೆ ಅಡಿ ಮನೆ ಮಂಜೂರು ಆಗುವ ಸಮಯದಲ್ಲಿ ನನ್ನ ಹೆಸರಿನಲ್ಲಿ ಖಾತೆ ಇರುವ ಬಗ್ಗೆ ಸರ್ಕಾರಕ್ಕೆ ದಾಖಲೆ ನೀಡಿರುತ್ತೇನೆ. ಅಸೆಸ್ಮೆಂಟ್ ಸಂಖ್ಯೆ.219 ರ ಆಸ್ತಿ ಪೂರ್ವಜರಿಂದ ಬಂದಿದೆ ಎಂದು ತೋರಿಸುವ ಬಗ್ಗೆ ಮತ್ತು ನನ್ನ ಮಾಲೀಕತ್ವದಲ್ಲಿದೆ ಎನ್ನುವ ಬಗ್ಗೆ ಅಸೆಸ್ಮೆಂಟ್ ಹೊರತುಪಡಿಸಿ ಬೇರೆ ದಾಖಲೆಗಳನ್ನು ಸರ್ಕಾರದವರಿಗೆ ನೀಡಿರುವುದಿಲ್ಲ ಅಂದರೆ ಸರಿ.

**ಡಿ.ಡಬ್ಲ್ಯು:1**

ಅಸೆಸ್ಮೆಂಟ್ ಸಂಖ್ಯೆ.219 ರ ಆಸ್ತಿ 2003-04 ನೇ ಸಾಲಿನಲ್ಲಿ ಯಾವ ಆಧಾರದ ಮೇಲೆ ಹಕ್ಕು ಬದಲಾವಣೆ ಆಗಿರುತ್ತದೆ ಎಂಬ ಮಾಹಿತಿಯು ಪುಸ್ತಕದಲ್ಲಿ ಲಭ್ಯ ಇರುವುದಿಲ್ಲ ಎಂದು ನಿಪಿ-5 ರಂತೆ ಗರ್ಜೆ ಗ್ರಾಮ ಪಂಚಾಯ್ತಿ ಅವರು 1 ನೇ ವಾದಿಗೆ ಹಿಂಬರಹ ನೀಡಿದ್ದಾರೆ ಅಂದರೆ ಸಾಕ್ಷಿಯು ನಮ್ಮ ಪೂರ್ವಜರ ಕಾಲದಿಂದಲೂ ಆಸ್ತಿಯನ್ನು ಅನುಭವಿಸಿಕೊಂಡು ಬಂದಿರುವ ಆಧಾರದ ಮೇಲೆ ನನ್ನ ಹೆಸರಿಗೆ ಖಾತೆ ಮಾಡಿದ್ದಾರೆ ಎಂದು ನುಡಿಯುತ್ತಾರೆ. 2003-04 ನೇ ಸಾಲಿನಲ್ಲಿ ಅಸೆಸ್ಮೆಂಟ್ ಸಂಖ್ಯೆ.219 ರ ಆಸ್ತಿಯಲ್ಲಿ ನಮ್ಮ ಪೂರ್ವಜರ ಕಾಲದಿಂದಲೂ ಸ್ವಾಧೀನ ಇರುವ ಆಧಾರದ ಮೇಲೆ ನನ್ನ ಹೆಸರಿಗೆ ಖಾತೆ ಮಾಡಲಾಗಿದೆ ಎಂದು ಷರಾ ಬರೆದಿದ್ದಾರೋ ಇಲವ್ಲೋ ನನಗೆ ಗೊತ್ತಿಲ್ಲ. ಅಸೆಸ್ಮೆಂಟ್ ಸಂಖ್ಯೆ.219 ರ ಆಸ್ತಿಯನ್ನು 1 ನೇ ಪ್ರತಿವಾದಿ ಹೆಸರಿಗೆ ಖಾತೆ ವರ್ಗಾವಣೆ ಮಾಡಿದ್ದು ಈಗ ಅಸೆಸ್ಮೆಂಟ್ ಸಂಖ್ಯೆ.219/1 ಎಂದು ಬದಲಾಗಿರುತ್ತದೆ ಅಂದರೆ ಸರಿ.

ವಾದಿಗಳು ಮೊದಲು ಕೆಲವು ವರ್ಷಗಳ ಕಾಲ ತುಮಕೂರಿನಲ್ಲಿ ಮತ್ತು ಕೆಲವು ವರ್ಷಗಳ ಕಾಲ ಹೊಸದುರ್ಗದಲ್ಲಿ ವಾಸವಿದ್ದು, ನಂತರ ಗರ್ಜೆ ಗ್ರಾಮದಲ್ಲಿ ವಾಸಿಸಲು ಪ್ರಾರಂಭಿಸಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ನಾನು ಮನೆ ಕಟ್ಟಿರುವ 12X33 ಅಡಿಗಳ ವಿಸ್ತೀರ್ಣದ ಆಸ್ತಿಯಲ್ಲಿ ಮೊದಲು ಕಪ್ಪುನಾಡ ಹೆಂಚಿನ ಮನೆ ಇತ್ತು ಅಂದರೆ ಸರಿ. ವಾದಿಗಳ ಅಣ್ಣ ಪ್ಯಾರೇಜಾನ್ ಹಳೆಯ ಮನೆ ಹೊಡೆದು ಹಾಕಿ ಹೊಸ ಮನೆ ಕಟ್ಟಿದ ನಂತರ ಇನ್ನುಳಿದ ಖಾಲಿ ಜಾಗಕ್ಕೆ 222 ರ ಆಸ್ತಿಯನ್ನು 219 ಎಂದು ಖಾತೆ ಮಾಡಿಸಿಕೊಂಡಿರುತ್ತೇನೆ ಅಂದರೆ ಸರಿಯಲ್ಲ. ಅಸೆಸ್ಮೆಂಟ್ ಸಂಖ್ಯೆ.222 ರ ಆಸ್ತಿಯನ್ನು 219 ಎಂದು ಖಾತೆ ಮಾಡಿಸಿಕೊಂಡಿರುವ ಕಾರಣ ಅಸೆಸ್ಮೆಂಟ್ ಸಂಖ್ಯೆ.219 ರ ಆಸ್ತಿಯ ಹಳೆಯ ದಾಖಲೆಗಳು ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಹೇಳುವಂತೆ ಅಸೆಸ್ಮೆಂಟ್ ಸಂಖ್ಯೆ.222 ಮತ್ತು 219 ರ ಆಸ್ತಿ ಬೇರೆ ಬೇರೆಯಲ್ಲ, ಬದಲಾಗಿ ದಾವಾ ಎ ಶೆಡ್ಯೂಲ್ ನ ಭಾಗವಾದ ದಾವಾ ಬಿ ಶೆಡ್ಯೂಲ್ ಆಸ್ತಿಯನ್ನು ಅಸೆಸ್ಮೆಂಟ್ ಸಂಖ್ಯೆ.219 ಎಂದು ಖಾತೆ ಮಾಡಿಸಿಕೊಂಡಿರುತ್ತೇನೆ ಅಂದರೆ ಸರಿಯಲ್ಲ. ಗ್ರಾಮ ಪಂಚಾಯ್ತಿ ಅವರು ಬಂದು ಅಳತೆ ಮಾಡಿ ನಾನು ಅಸೆಸ್ಮೆಂಟ್ ಸಂಖ್ಯೆ.222 ರಲ್ಲಿ

ಮನೆ ಕಟ್ಟಿದ್ದೇನೆ ಎಂದು ವರದಿ ಮಾಡಿದರೆ ನೀವು ಬಿಟ್ಟುಕೊಡುತ್ತೀರಾ? ಅಂದರೆ ಸಾಕ್ಷಿಯು ಬಿಟ್ಟು ಕೊಡಲು ಆಗುವುದಿಲ್ಲ, ನಾನು ನನ್ನ ಆಸ್ತಿಯಲ್ಲಿ ಮನೆ ಕಟ್ಟಿದ್ದೇನೆ ಎಂದು ನುಡಿಯುತ್ತಾರೆ. ಅಸೆಸ್ಮೆಂಟ್ ಸಂಖ್ಯೆ.219 ರ ಆಸ್ತಿ ಎಲ್ಲಿದೆ ಎಂದು ನನಗೆ ಗೊತ್ತಿಲ್ಲದ ಕಾರಣ ವಾದಿಗೆ ಸೇರಿದ ದಾವಾ ಬಿ ಶೆಡ್ಯೂಲ್ ಆಸ್ತಿಯಲ್ಲಿ ಮನೆ ನಿರ್ಮಿಸಿಕೊಂಡಿದ್ದೇನೆ ಅಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಮುಂದೂಡಲಾಯಿತು.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)
3 ನೇ.ಹೆ.ಪ್ರಃದಃನ್ಯಾಃದಂ.,ರವರು, ಕಡೂರು.